
# ಸುಂದರ ನಾಡಕರ್ಣಿ

(1938-1994)



ಚಿತ್ರ: ಕೃಷ್ಣಾನಂದ ಕಾಮತ

ಉತ್ತಮವಾದುದ್ದನ್ನು ಬರೆದೂ ತೆರೆಯ ಮರೆಯಲ್ಲೇ ಉಳಿದುಹೋದ ಲೇಖಕ ಸುಂದರ ನಾಡಕರ್ಣಿ. ಅವರು ಕವಿ, ಕತೆಗಾರ, ಕಾದಂಬರಿಕಾರ. ಅವರು ತಮ್ಮ ಬರಹಗಳಲ್ಲಿ ಹಳ್ಳಿಯ ರಮ್ಯ ಚಿತ್ರಣ ಕೊಟ್ಟರು. ಆ ಚಿತ್ರಣಗಳು ಮುಟ್ಟಿದರೆ ಕೈಗೆ ಅಂಟಿಕೊಳ್ಳುವ ಮಣ್ಣಿನ ಹಸಿಯೊಂದಿಗೆ, ಅಲ್ಲಿನ ಬದುಕಿನ ಆಪ್ತತೆ, ಮುಗ್ಧತೆಯೊಂದಿಗೆ ಮೈತಳೆದಿವೆ. ಈಗಿನ ಓದುಗರು ಅಷ್ಟಾಗಿ ಗಮನಿಸಿರದ ಲೇಖಕ ಸುಂದರ ನಾಡಕರ್ಣಿ, ಕನ್ನಡದ ಪ್ರಸಿದ್ಧ ಕತೆಗಾರ ಯಶವಂತ ಚಿತ್ತಾಲರ ಊರು ಗೋಕರ್ಣದ ಸಮೀಪದ ಹನೇಹಳ್ಳಿಯವರು.

ಗುಜರಾತಿನ ಆನಂದದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಅವರು ಕನ್ನಡ ಸಾಹಿತ್ಯದ ವಾತಾವರಣದಿಂದ ಕೊಂಚ ದೂರವೇ ಉಳಿದ ಬರಹಗಾರರಾಗಿದ್ದರು. ಈ ಲೇಖಕ ಮತ್ತು ಅವರ ಸಾಹಿತ್ಯದ ಉಲ್ಲೇಖ, ಚರ್ಚೆ ಕನ್ನಡದಲ್ಲಿ ಆಗಿದ್ದು ಕಡಿಮೆಯೇ. 'ಮಥನ', 'ಹಸಿರು ದೀಪ', 'ಉಸಿರುಗಳ ಬೀದಿಯಲಿ', 'ಅಂತರದ ನೀರು ನೆಗಸು' ಅವರ ಕವನಸಂಗ್ರಹಗಳಾಗಿವೆ. 'ಅವರ ನಡುವೆ', 'ಸುದ್ದಿ' ಅವರ ಕಥಾಸಂಗ್ರಹಗಳಾದರೆ, 'ಮೋಹಿತರು', 'ಗೋಡೆಗಳು','ಮಂದಿಮನೆ', 'ವೇಷ', 'ಈ ಕೂಪ' ಅವರ ಕಾದಂಬರಿಗಳಾಗಿವೆ.

ಬರುತ್ತಿದ್ದಾನೆ. ಮೋರೆ ಕಾಣದ ಹಾಗೆ ಟೊಪ್ಪಿಗೆ ಮೂಗಿಗೆ ಇಳಿಸಿ ಒಂದು ಕೈಬೀಸುತ್ತಿರುವುದು ಕಾಣುತ್ತದೆ. ಕೈಯಲ್ಲಿ ಏನೋ ಇದೆ ಎಂಬುದೂ ಅಸ್ಪಷ್ಟ ಕಾಣುತ್ತದೆ. ಪೇಂಟು ಕತ್ತರಿಸಿ ಮಾಡಿದ 'ಚಡ್ಡಿ' ಮೊಣಕಾಲು ದಾಟಿ ಕೆಳಗೆ ಬಂದಿದೆ; ಅನ್ನಬೇಕೋ ಬೇಡವೋ ಎಂಬ ಮಾದರಿಯ ಒಂದು ಶರ್ಟು, ಬೆನ್ನಿಗೆ ಚೀಲ ಹೊತ್ತು ಜೋಕಾಲಿ ಹೊಡೆಯುವ ಚಟವಿದ್ದುದರಿಂದ ನಡಿಗೆ ಬೇಡ ಕುಳಿತುಕೋ ಎನ್ನುವ ಹಾಗೆ ಇತ್ತು. ಎರ್ಡು ಹೆಜ್ಜೆ ಮುಂದಾದರೆ ಒಂದು ಹೆಜ್ಜೆ ಹಿಂದೆ. ರಾಯಪ್ಪ ಅಂತೂ ಬಂದು ತಲುಪಿದ. ಬೆನ್ನಿಗಿದ್ದ ಚೀಲ ಇಂದು ತೀರ ಹಗುರ. ಸಾಲದೇ ಒಂದು ಕೈಯಲ್ಲಿ ಕಾಲಿನ ಜೋಡು ಹಿಡಿದುಕೊಂಡಿದ್ದಾನೆ. ಬಂದು ಧಡಾರನೆ ಪೋಸ್ಟು ಆಫೀಸಿನ ಕದ ದೂಡಿ, 'ಜೋಡು' ನಾಯಿಗೂ ಕಳ್ಳರಿಗೂ ನಿಲುಕದ ಜಾಗ ನೋಡಿ ಇಟ್ಟು ಬಂದು ತಂದ ಚೀಲ ಧಪ್ಪನೇ ಒಗೆದ.

'ಇಸ್ಸೀ ಇಂದೇನು ಬರೀ ಖಾಲಿ ಚೀಲ' ಎಂದರು ಪೋಸ್ಟ್ ಮಾಸ್ತರರು.